## ರೆಸ್ಟ್ ಇಲ್ಲದ ಎವರೆಸ್ಟ್

‘ರೆಸ್ಟ್ ಇಲ್ಲದ ಎವರೆಸ್ಟ್’ – ಟಿ.ಆರ್. ಅನಂತರಾಮು ಅವರು ಬರೆದಿರುವ (ಜ. 28ರ ಸಂಚಿಕೆ) ಲೇಖನ ಓದಿ ಆಶ್ಚರ್ಯವೂ ಸಂತೋಷವೂ ಆಯ್ತು. ಲೇಖನ ಪ್ರಕಟಿಸಿದ ‘ಸುಧಾ’ಗೆ ಧನ್ಯವಾದಗಳು.

—ಮಹಾಂತೇಶ ಬಿದರಿಮಠ, ಹುಬ್ಬಳ್ಳಿ

ಹಿಮಾಲಯ ಪರ್ವತಶ್ರೇಣಿಯಲ್ಲಿರುವ ಈ ಮಹಾಶೃಂಗದ ಎತ್ತರದ ಬಗೆಗಿರುವ ವಿವಾದಗಳೊಂದಿಗೆ ಆವರಿಸಿರುವ ರಾಜಕೀಯ ಗೊಂದಲಗಳೂ ಸ್ವಾರಸ್ಯವಾಗಿವೆ.

—ಪ್ರಭಾಪ್ರಸಾದ್, ಬೆಂಗಳೂರು

ಮುಖಪುಟ ಲೇಖನದ ಶೀರ್ಷಿಕೆ ಓದಿದಾಗ ಮೊದಲು ಆಸಕ್ತಿಯೇ ಹುಟ್ಟಲಿಲ್ಲ. ಸಮಯ ಕೊಲ್ಲಲು ಮೊದಲ ಪ್ಯಾರಾ ಓದಿದೆ. ಆಮೇಲೆ ಓದುವುದನ್ನು ನಿಲ್ಲಿಸಲು ಸಾಧ್ಯವೇ ಆಗಲಿಲ್ಲ. ಇಂತಹ ಆಸಕ್ತಿ ಹುಟ್ಟಿಸುವ ಲೇಖನಗಳನ್ನು ನಾನು ‘ಸುಧಾ’ದಲ್ಲಿ ಮಾತ್ರ ಕಂಡಿದ್ದೇನೆ.

—ಸುಧಾಕರ್ ಜೈನ್, ಬೆಂಗಳೂರು

## ಕೆರೆಗಳ ಕಲ್ಯಾಣ

ಜ.28ರ ಸಂಚಿಕೆಯಲ್ಲಿ ಶಿವಾನಂದ ಕಳವೆ ಅವರು ಬರೆದಿರುವ ‘ಹೈರಾಣಾದ ಹಳಿಯಾಳದಲ್ಲಿ ಕೆರೆಗಳ ಕಲ್ಯಾಣ’ ಲೇಖನ ಓದಿದೆ. ಹೂಳು ತುಂಬಿದ ಕೆರೆಗಳಿಗೆ ಮರುಜೀವ ನೀಡುವ ಕೆಲಸವನ್ನು ಬರಹಗಾರರು ಅಚ್ಚುಕಟ್ಟಾಗಿ ವಿವರಿಸಿದ್ದಾರೆ. ಹಾಗೆಯೇ, ಒಂದು ಬಾರಿ ಹೂಳು ತೆಗೆದ ನಂತರ ಮತ್ತೆ ಹೂಳು ತುಂಬದ ಹಾಗೆ ನೋಡಿಕೊಳ್ಳಬಹುದಾ, ಮರುಜೀವ ಪಡೆದ ಕೆರೆಗಳಲ್ಲಿ ಕಳೆಗಿಡಗಳು ಬೆಳೆಯದಂತೆ ನಿಭಾಯಿಸಬಹುದಾ ಎಂಬುದರ ಬಗ್ಗೆ ಒಂದೆರಡು ಸಾಲು ಇದ್ದಿದ್ದರೆ ಚೆನ್ನಾಗಿತ್ತು.

—ಮಿಲನ, ತುಮಕೂರು

ಕೆರೆಯ ಕಾಯಕಲ್ಪದ ಲೇಖನ ಓದುತ್ತಾ ನನ್ನ ನೌಕರಿಯ ದಿನಗಳು ನೆನಪಾದವು. ನನ್ನ ಮೊದಲ ನೌಕರಿ 1965ರ ಫೆಬ್ರುವರಿಯಲ್ಲಿ ಲೇಖಕರು ಬರೆದಿರುವ ‘ಕಾವಲವಾಡ’ ಗ್ರಾಮದಲ್ಲಿ ಶುರುವಾಯಿತು. ಆಗೆಲ್ಲಾ ಅಲ್ಲಿ ಕೆರೆಗಳು ತುಂಬಿ ತುಳುಕುತ್ತಿದ್ದವು. ಆ ಭಾಗದಲ್ಲಿ ಕೆರೆಗಳು ಒಣಗಿತೆಂದರೆ ನಂಬಲಸಾಧ್ಯ. ಈಗಲಾದರೂ ದೇಶಪಾಂಡೆ ಫೌಂಡೇಶನ್ ವತಿಯಿಂದ ಕಾಯಕಲ್ಪ ನಡೆದು, ನೀರು ನಿಂತಿರುವುದು ಖುಷಿಯ ವಿಷಯ.

—ಪ್ರಸಾದ್, ಶಂಖ

## ಕಾನೂನು ಕಣ್ಣು



ಜ. 28ರ ಸಂಚಿಕೆಯ ‘ಕಾನೂನು ಕಣ್ಣು’ ಪುಟದಲ್ಲಿ ಸೌಮ್ಯಲಕ್ಷ್ಮಿ ಕುಕ್ಕಜೆ ಅವರು ಬರೆದಿರುವ ‘ಗಳಿಸಿದ್ದೆಲ್ಲ ಮಕ್ಕಳಿಗೆ ಕೊಟ್ಟರೆ..’ ಲೇಖನ ಓದಿದೆ. ಲೇಖಕರು ತಮ್ಮ ವೃತ್ತಿಯ ಉಪಯುಕ್ತ ಅನುಭವಗಳನ್ನು ಮತ್ತು ಚಿಂತನೆಗೆ ಹಚ್ಚುವ ವಿಚಾರಗಳನ್ನು ತಮ್ಮ ಬರಹಗಳ ಮೂಲಕ ಓದುಗರಿಗೆ ತಲುಪಿಸುತ್ತಿದ್ದಾರೆ. ಇದು ಪುತ್ರವ್ಯಾಮೋಹದಲ್ಲಿ ಮೈಮರೆತಿರುವ ಹಿರಿಯ ನಾಗರಿಕರ ಕಣ್ತೆರೆಸುವಂಥ ಲೇಖನ. ಹೀಗೆ ಮಕ್ಕಳ ಕೈಗೆ ಆಸ್ತಿ ಕೊಟ್ಟು ಅನಾಥರಾದವರು ಸಾವಿರಾರು ಇದ್ದಾರೆ.

—ಎಂ.ಆರ್. ಚಂದ್ರಶೇಖರ್

ಲೇಖನ ಕಣ್ತೆರೆಸುವಂತಿದೆ. ಲೇಖಕಿ ತಿಳಿಸಿದಂತೆ ‘ವೃದ್ಧರ ಸಹಾಯವಾಣಿ’ ಆದಷ್ಟು ಬೇಗನೆ ಕಾರ್ಯರೂಪಕ್ಕೆ ಬರಲೆಂದು ಆಶಿಸುತ್ತೇನೆ.

—ಸುಮನಾ

ಪೋಷಕರ ಜವಾಬ್ದಾರಿ ಮಕ್ಕಳದು ಎನ್ನುವ ಕಾಲ ಇದಲ್ಲ. ಹಾಗೆಯೆ ಪೋಷಕರೂ ಮಕ್ಕಳಿಗೆ ಹೊರೆಯಾಗಲು ಬಯಸುವುದಿಲ್ಲ. ತಮ್ಮ ಸಂಧ್ಯಾಕಾಲದಲ್ಲಿ ಉಳಿಸಿದ ಹಣದಿಂದ ನೆಮ್ಮದಿಯಿಂದ ಇರಲು ಬಯಸುತ್ತಾರೆ. ಹೀಗಿರುವಾಗ ಮಕ್ಕಳು ಹಣದ ಬೇಡಿಕೆ ಇಟ್ಟರೆ ಅವರ ಜೀವನದ ದಾರಿ ಏನು?

—ವಿಜಯಾಪ್ರಸಾದ್

ಓರ್ವ ನ್ಯಾಯವಾದಿಯಾಗಿ ಸಿ.ಆರ್.ಪಿ.ಸಿ ಇತ್ಯಾದಿಗಳನ್ನು ನಮೂದಿಸಿ ಬರೆದಿರುವ ಲೇಖನ ಉತ್ತಮವಾಗಿದೆ. ಪೋಷಕರು ಬದುಕಿರುವಾಗಲೇ ಆಸ್ತಿಯಲ್ಲಿ ಪಾಲು ಕೇಳುವುದು, ದಾವೆ ಹೂಡುವುದರ ಹಿನ್ನೆಲೆಯಲ್ಲಿ ಉಂಟಾಗಬಹುದಾದ ಮಾನಸಿಕ ವೇದನೆಯ ಬಗ್ಗೆಯೂ ಗಮನಹರಿಸಬೇಕು.

—ರಾಜೀವ್. ಎಸ್. ಮಾಗಲ್, ಹಾಸನ ಜಿಲ್ಲೆ

## ಬಾಣಂತಿ ಪಾರ್ಟಿ

ಕೋಡಿಬೆಟ್ಟು ರಾಜಲಕ್ಷ್ಮಿ ಅವರ ಬಾಣಂತಿ ಆಹಾರ ಸೇವನೆ ಬಗ್ಗೆ ಲೇಖನ ಅರ್ಥಪೂರ್ಣವಾಗಿತ್ತು.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

ಸ್ವಯಂಪ್ರಭಾ ‘ಮಕ್ಕಳ ಕೈ ಚಂದ್ರನತ್ತ’ ಲೇಖನದಲ್ಲಿ ಹೇಳಿರುವಂತೆ ಮಕ್ಕಳ ಮನಸ್ಸು ಬಹಳ ಸೂಕ್ಷ್ಮ. ಉದಾಹರಣೆಗಳ ಮೂಲಕ ಜಗತ್ತನ್ನು ಅರ್ಥ ಮಾಡಿಕೊಳ್ಳುವ ಗುಣವನ್ನು ಎತ್ತಿ ತೋರಿಸಿರುವ ಲೇಖನವಿದು. ಅರ್ಥಪೂರ್ಣವಾಗಿ ಮೂಡಿಬಂದಿದೆ. ರಾಜಲಕ್ಷ್ಮಿ ಕೋಡಿಬೆಟ್ಟು ಅವರ ಲೇಖನವು, ಮಗು ಹುಟ್ಟಿದಾಗ ಬಾಣಂತಿಗೆ ಪಥ್ಯದ ನೆಪದಲ್ಲಿ ಸಿಗುವ ಕಾಳಜಿ, ಅಮ್ಮನ ಬದುಕಿಗೆ ಸಂಭ್ರಮವೇ ಎಂದು ಒತ್ತಿ ಹೇಳಿದೆ.

—ಸಾವಿತ್ರಿ ಶ್ಯಾನುಭಾಗ, ಕುಂದಾಪುರ

ಈ ಲೇಖನದಿಂದ ಎಲ್ಲಾ ಹೆಣ್ಣುಮಕ್ಕಳಿಗೂ ಬಾಣಂತನದ ನೆನಪು ಮರುಕಳಿಸುವುದು ಸಹಜ.

—ಎಂ. ಎಸ್. ಉಷಾ ಪ್ರಕಾಶ್, ಮೈಸೂರು

## ಸ್ಫೂರ್ತಿ ಕಥನ

ಜ. 28ರ ಸಂಚಿಕೆಯಲ್ಲಿ ಶಶಿಕುಮಾರ್ ಸಿ. ಅವರು ಬರೆದಿರುವ ‘ನಾರಾಯಣನಿಗೆ ಕನ್ನಡವೇ ಊರುಗೋಲು’ ಲೇಖನ ಓದಿ ಮನಸ್ಸಿಗೆ ಬೇಸರವಾಯಿತು.

—ಲಕ್ಷ್ಮಣ್ ರಾವ್ ಎಂ. ಎಲ್., ದಾವಣಗೆರೆ

## ಹನಿಗವನ ಪ್ರಕಟಿಸಿ

ಗುರುವಾರ ಬಂದರೆ ನೆನಪಾಗುವುದು ಶ್ರೀ ರಾಘವೇಂದ್ರ ಸ್ವಾಮಿಗಳು ಮತ್ತು ಗುರುವಾರ ಅಂಗಡಿಯಲ್ಲಿ ಸಿಗುವ ‘ಸುಧಾ’ ವಾರಪತ್ರಿಕೆ! ಆದರೆ ಇತ್ತೀಚೆಗೆ ಪತ್ರಿಕೆ ಹನಿಗವನಗಳನ್ನು ಪ್ರಕಟಿಸುತ್ತಲೇ ಇಲ್ಲ. ಹನಿಗವನಪ್ರಿಯನಾದ ನನಗಂತೂ ಇದರಿಂದ ನಿರಾಸೆಯಾಗಿದೆ. ದಯವಿಟ್ಟು ಮುಂದಿನ ಸಂಚಿಕೆಗಳಲ್ಲಿ ಹನಿಗವನಗಳನ್ನು ಅಚ್ಚು ಮಾಡಿ.

—ಆರ್. ಸುನೀಲ್, ತರೀಕೆರೆ

## ಅಚ್ಚುಕಟ್ಟಾದ ಕಥೆ ‘ಸ್ಫೋಟ’



ಜ. 28ರ ಸಂಚಿಕೆಯಲ್ಲಿ ವಸುಮತಿ ಉಡುಪ ಬರೆದ ‘ಸ್ಫೋಟ’ ಕತೆಯು 25 ವರ್ಷಗಳ ಹಿಂದಿನ ಗೃಹಿಣಿಯರ ಮನೆಮನೆ ಕಥೆಯಾಗಿ ಚೆನ್ನಾಗಿ ಮೂಡಿಬಂದಿದೆ.

—ಸತ್ಯವತಿ ಕುಳಿಹಿತ್ತಲು, ಚಿಕ್ಕಮಗಳೂರು

ವಸುಮತಿ ಉಡುಪರ ಕಥೆ ಎಂದರೆ ಸಾಕು, ನನಗೆ ಬಲು ಇಷ್ಟ. ಓದಿದರೆ ಎಲ್ಲಿ ಮುಗಿದು ಹೋಗುತ್ತೋ ಅಂತ ನಿಧಾನಕ್ಕೆ ಸವಿದು ಓದುತ್ತೇನೆ. ‘ಸ್ಫೋಟ’ವಂತೂ ಹೆಂಗಳೆಯರ ಮನಸಿನ ಕನ್ನಡಿಯಂತಿತ್ತು.

—ಶ್ಯಾಮಲಾ ಎಚ್.ಎಸ್., ಬೆಂಗಳೂರು

ವಯಸ್ಸಾದ ದಂಪತಿಗಳಲ್ಲಿ ಮಡದಿಯ ಮನಸ್ಸಿನಲ್ಲಿ ಮಡುಗಟ್ಟಿದ ಭಾವನೆಗಳು ಹೊರಬಂದು ಮನಸ್ಸಿನಲ್ಲೇ ಸ್ಫೋಟಿಸುವ ಕಥೆ ವಾಸ್ತವಕ್ಕೆ ಬಹಳ ಹತ್ತಿರವಿದೆ.

—ಜ್ಯೋತಿ ಶೆಟ್ಟಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in